### ಸಕಾಲಿಕ ಲೇಖನ



ಡಿಜಿಟಲ್ ಪಥ್ಯ (ಸುಮಲತಾ ಎನ್. ಡಿ. 8) ಮುಖಪುಟ ಲೇಖನ ಸಕಾಲಿಕವಾಗಿದ್ದು, ಕಿರಿಯ ಹಾಗೂ ಹಿರಿಯ ವರ್ಗದವರಿಗೂ ಸಲ್ಲುವಂತೆ ಇದೆ. ಈಗಂತೂ ಫೋನ್ ಇಲ್ಲದೆ ದಿನವೇ ಓಡುತ್ತಿಲ್ಲ. ಇಂತಹ ಗೀಳಿಗೆ ಸಿಲುಕುವವರು ಹದಿಹರೆಯದವರು. ಇವರಿಗೆ ಜಾಲತಾಣ ಜಾಲಾಡುವ ಚಟ. ಅಪರಿಚಿತರೊಂದಿಗೆ ಸ್ನೇಹ, ತಮಗೇ ಅರಿಯದಂತೆ ಕೆಟ್ಟ ಚಟಗಳಿಗೆ, ಮಾಯಾಜಾಲಗಳಿಗೆ ಸಿಲುಕಿ ನರಳುವಂತಾಗುವರು. ಪೋಷಕರೂ ಇದರಿಂದ ಹೊರತಲ್ಲ. ಲೇಖನ ಎಲ್ಲರ ಕಣ್ಣುತೆರೆಸುವಂತಿದೆ.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು

### ಎಚ್ಚರಿಕೆಯ ಗಂಟೆ

ಮೊಬೈಲ್ ವ್ಯಸನಿಗಳಿಗೆ ಎಚ್ಚರಿಕೆಯ ಗಂಟೆಯಂತಿದೆ. ಈಗ ವಯಸ್ಕರು, ಮಕ್ಕಳಾದಿಯಾಗಿ ಮೊಬೈಲ್ ಎಂಬ ಮಾಯಾಜಾಲದೊಳಗೆ ಸಿಲುಕಿಕೊಂಡಿದ್ದಾರೆ. ಈಗೀಗ ಇಂತಹ ಜಾಲತಾಣಗಳಿಂದ ದೂರ ಉಳಿಯುವವರ ಸಂಖ್ಯೆ ಹೆಚ್ಚುತ್ತಿದೆ, ಇದು ಸ್ವಾಗತಾರ್ಹ.

—ಭಾರತೀ ಗಂಗಾಧರ್, ಬೆಂಗಳೂರು

### ಸಮಯೋಚಿತ ಸಂಪಾದಕೀಯ

‘ನಿಮ್ಮೊಡನೆ’ಯಲ್ಲಿ ‘ವ್ಯಾಪಕವಾಗುತ್ತಿದೆ ಮಹಿಳಾ ದೌರ್ಜನ್ಯ—ಹಿಂಸೆ, ಆರೋಗ್ಯಕರ ಸಮಾಜ ಬರೀ ಕನವರಿಕೆಯೇ?’ (ರಘುನಾಥ ಚ.ಹ., ಡಿ. 8) ಸಮಯೋಚಿತವಾಗಿದೆ.

—ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕ

### ಚಿಂತನಾರ್ಹ ಬರಹ

ಮಹಿಳಾ ದೌರ್ಜನ್ಯ ಕುರಿತ ಸಂಪಾದಕೀಯ ಇಂದಿನ ಜ್ವಲಂತ ಸಮಸ್ಯೆಯನ್ನು ಎತ್ತಿ ಹಿಡಿಯುವುದರೊಂದಿಗೆ ಚಿಂತನೆಗೆ ಹಚ್ಚುತ್ತದೆ. ನನ್ನ ಅನುಭವಕ್ಕೆ ಬಂದ ಪುಟ್ಟ ಪ್ರಸಂಗ, ಎರಡು ವರ್ಷಗಳ ಹಿಂದಿನದು. ಯಾವುದೋ ಧಾರ್ಮಿಕ ಕಾರ್ಯಕ್ರಮದ ವಂತಿಗೆ ವಸೂಲಿಗಾಗಿ ಮನೆಗೆ ಪುರುಷರಿಬ್ಬರು ಆಗಮಿಸಿದ್ದರು. ನಮ್ಮವರು ಮನೆಯಲ್ಲಿ ಇಲ್ಲದ ಹಿನ್ನೆಲೆಯಲ್ಲಿ ನಾನು ಒಂದಿಷ್ಟು ಪುಟ್ಟ ಮೊತ್ತ ನೀಡಿದೆ. ಅದು ಸಣ್ಣದೆಂಬ ಅವರ ನಿರಾಕರಣೆಯ ಭಯವೂ ಇತ್ತು. ಆದರೆ ಆದದ್ದೇ ಬೇರೆ. ಒಬ್ಬ ಸ್ವೀಕರಿಸಿದ, ಇನ್ನೊಬ್ಬ ರಶೀದಿ ಪುಸ್ತಕ ತೆರೆದು... ಯಜಮಾನರ ಹೆಸರು ಹೇಳಿ ಅಂದ. ನಾನು ನನ್ನ ಹೆಸರು ಹೇಳಿದೆ. ಆತ ನಿಮ್ಮದಲ್ಲ. ನಿಮ್ಮವರ ಹೆಸರು ಹೇಳಿ ಎಂದ. ಯಾರ ಹೆಸರಾದರೇನು? ನಿಮಗೆ ಹಣ ಬಂದರಾಯಿತಲ್ಲ?.. ಇದು ನನ್ನದೇ ಹಣ. ನಾನು ನಿವೃತ್ತ ಉದ್ಯೋಗಿ.. ನನ್ನ ಹೆಸರು ಬರೆದರೇನು? ಹೇಳಿದೆ. ಕೊನೆಗೂ ನನ್ನ ಹೆಸರಿಗೇ ರಶೀದಿ ಬರೆದು, ದಪ್ಪ ಮುಖ ಹೊತ್ತು ನಿರ್ಗಮಿಸಿದರು. ಇಂತಹ ತಾರತಮ್ಯದ ಸಂಗತಿಗಳು ಹಲವಾರು. ಇಂಥವು ತೊಲಗಬೇಕು.

—ಸುಶೀಲಾ ಆರ್.ರಾವ್, ಉಡುಪಿ

### ಪ್ರೀತಿಯ ತೀಕ್ಷ್ಣತೆ



‘ಸಮಾಧಿಗೂ ಮುನ್ನ’ ಕಥೆ (ಪ್ರಭಾಕರ ಶಿಶಿಲ, ಡಿ. 8) ಧರ್ಮ ಜಾತಿಗಳನ್ನು ಮೀರಿ ಪ್ರೀತಿಯ ತೀಕ್ಷ್ಣತೆಯನ್ನು ಮನದಟ್ಟು ಕೊಟ್ಟಿತು. ‘ಕುಲದೀಪಿಕಳಿಗೆ ಕೊಟ್ಟುಬಿಡಿ’ ಎನ್ನುವ ಮಾತಿನಲ್ಲಿ ಹೆಣ್ಣಿನ ಹಾಗೂ ಮಮಕಾರ ಎಲ್ಲವೂ ವಿರಾಜಮಾನವಾಗಿದೆ. ನೆನಪಿನಲ್ಲಿ ಉಳಿಯುವ ಕಥೆ.

—ಮನು ಎಂ. ಸತ್ತೇಗಾಲ

ಅಂತರ್ಧರ್ಮೀಯ ವಿವಾಹದ ಸವಾಲುಗಳ ಸುತ್ತ ಹೆಣೆದರೂ, ಆ ಜೋಡಿಯು ಅದನ್ನು ಜೀರ್ಣಿಸಿಕೊಂಡ ಬಗೆಯನ್ನು ಮನೋಜ್ಞವಾಗಿ ಕಟ್ಟಿಕೊಡಲಾಗಿದೆ. ಸತ್ವದ ನೆತ್ತಿಯ ಮೇಲೇ ಕಥೆಯ ಕಾಲ್ಪನಿಕತೆಯನ್ನು ಬೆಳೆಸುವ ಶಿಶಿಲರ ಶೈಲಿ ಸದಾ ಅಚ್ಚುಮೆಚ್ಚು.

—ಡಾ. ಲಕ್ಷ್ಮೀನಾರಾಯಣ ಭಟ್ಟ, ಮಂಗಳೂರು

### ಸ್ಫೂರ್ತಿದಾಯಕ ಬರಹ



ಹರ್ಗಿಲಾ ಆರ್ಮಿಯ ‘ಗುರು’ ಪೂರ್ಣಿಮಾ (ಗುರು ಪಿ.ಎಸ್., ಡಿ. 8) ಅತ್ಯಂತ ಸ್ಫೂರ್ತಿದಾಯಕ ಮತ್ತು ಮಹತ್ವದ ಮಾಹಿತಿಯನ್ನು ಕನ್ನಡಿಗರಿಗೆ ಪರಿಚಯಿಸಿದೆ. ಪೂರ್ಣಿಮಾದೇವಿ ಬರ್ಮನ್ ಅವರ ಬದ್ಧತೆ, ಸಾಧನೆ ಶ್ಲಾಘನೀಯ. ಇವರಿಗೆ ವಿಶ್ವಸಂಸ್ಥೆಯ ‘ಚಾಂಪಿಯನ್ಸ್ ಆಫ್ ದಿ ಅರ್ಥ್’ ಪ್ರಶಸ್ತಿ ದೊರಕಿರುವುದು ಅತ್ಯಂತ ಔಚಿತ್ಯಪೂರ್ಣ. ಹರ್ಗಿಲಾ ಪಕ್ಷಿಯ ಛಾಯಾಚಿತ್ರ ಪ್ರಕಟಗೊಂಡಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸಿತು.

—ಶಶಿಧರ ಎಲೆ, ಬೆಂಗಳೂರು

### ನಿಮ್ಮೊಡನೆ: ಪೂರಕ ಟಿಪ್ಪಣಿ

ಮಹಿಳಾ ದೌರ್ಜನ್ಯ ಆರೋಗ್ಯಕರ ಸಮಾಜ ಬರಹ ಅತಿ ಅವಶ್ಯವಾದ ವಿಚಾರದ ಬಗ್ಗೆ ಚಿಂತಿಸುವಂತೆ ಮಾಡಿದೆ. ಶಾಲಾ ದಿನಗಳಿಂದಲೇ ಮಕ್ಕಳಿಗೆ ಸಮಾನತೆಯ ಬಗ್ಗೆ ತಿಳಿಸಲೇಬೇಕು. ವಿದ್ಯಾಭ್ಯಾಸದಿಂದ ಹೊರಗೆ ಉಳಿಯುವ ಹುಡುಗ ಹುಡುಗಿಯರಿಗೂ ಈ ಬಗ್ಗೆ ಅರಿವು ಮೂಡಿಸುವ ಮಾರ್ಗಗಳನ್ನು ಹುಡುಕಬೇಕು. ಕೆಲಸಕ್ಕೆ ಸೇರುವಾಗ ಸಮಾನತೆಯ ಬಗ್ಗೆ, ಮಹಿಳೆಯರಿಗೆ ಗೌರವ ಕೊಡುವ ಬಗ್ಗೆ ವಿಶೇಷ ತರಬೇತಿ ನೀಡಬೇಕು. ಇದನ್ನು ಅಸಂಘಟಿತ ಕ್ಷೇತ್ರದಲ್ಲಿಯೂ ಅಳವಡಿಸಲೇಬೇಕು; ಅದನ್ನು ಸಾಧಿಸಲು ಮಾರ್ಗೋಪಾಯಗಳನ್ನು ಹುಡುಕಬೇಕು.

- ಮಹಿಳೆಯರ ಸಮಾನತೆಯನ್ನು ಒಪ್ಪಿಕೊಂಡು ಗೌರವಿಸುವುದನ್ನು ಕಲಿಸಬೇಕು.
- ಮಹಿಳಾ ದೌರ್ಜನ್ಯಕ್ಕೆ ಆಗುವ ಶಿಕ್ಷೆಯ ಬಗ್ಗೆ ಅರಿವು ಮೂಡಿಸಬೇಕು.
- ಮಹಿಳೆಯರು ಅದರಲ್ಲೂ ಯುವತಿಯರು ಹೆಚ್ಚು ಓಡಾಡುವ ಕಡೆಗಳಲ್ಲಿ (ಶಾಲಾ ಕಾಲೇಜು, ಮಾಲ್ ಮಾರುಕಟ್ಟೆಗಳು) ಅವರನ್ನು ಕಿಚಾಯಿಸುವ, ಚುಡಾಯಿಸುವ ಪಡ್ಡೆ ಹುಡುಗರ ಹುಟ್ಟಡಗಿಸಬೇಕು. ಪೊಲೀಸರು ಇದರಲ್ಲಿ ಕಾರ್ಯಪ್ರವೃತ್ತರಾದರೆ ಒಂದು ಕಡೆ ಧೈರ್ಯ, ಮತ್ತೊಂದೆಡೆ ಭಯ ಉಂಟಾಗುತ್ತವೆ. ಮಹಿಳೆಯರು ಅವರ ಪಾಡಿಗೆ ಅವರು ಇರಲು ಅನುಕೂಲವಾಗುತ್ತದೆ. ಹೀಗಾದಲ್ಲಿ, ಬರಹದ ಕಡೆಯ ವಾಕ್ಯ, ‘ಅವರ ಪಾಡಿಗೆ ಇರಲು ಬಿಟ್ಟರೆ, ಮಹಿಳೆಯರೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾರೆ’ ಎಂಬುದಕ್ಕೆ ಪೂರಕವಾಗಬಹುದು.

—ಜಿ.ವಿ. ಅರುಣ, ಬೆಂಗಳೂರು

### ಚೇತೋಹಾರಿ ಬರಹ

ಆರೋಗ್ಯ ಲೇಖನ ‘ಚೈತನ್ಯಕ್ಕೆ ಬೇಕಿದೆ ಹ್ಯಾಪಿ ಹಾರ್ಮೋನ್’ (ಸುಷ್ಮಸಿಂಧು, ಡಿ. 8) ಓದಿಯೇ ಚೇತೋಹಾರಿ ಅನುಭವ ಉಂಟಾಗುವಂತಿದೆ. ದೇಹದಲ್ಲಿ ಬಿಡುಗಡೆಯಾಗುವ ಹಾರ್ಮೋನ್‌ಗಳ ವಿವರಣೆಯೊಂದಿಗೆ, ಸ್ತ್ರೀಯರಿಗೆ ಅವರವರ ಹವ್ಯಾಸದ ಆಯ್ಕೆ ಅವರಿಂದಲೇ ಮನ ಮುದಗೊಳಿಸಿಕೊಳ್ಳಬಹುದೆಂಬ ಕಿವಿಮಾತು ಆಪ್ಯಾಯಮಾನವೆನಿಸಿತು

—ಸುಬ್ರಹ್ಮಣ್ಯ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in